09-08-2023
Vijayavani Pg 02



» ವಸ್ತು ಪ್ರದರ್ಶನ-ಸಂವಾದ: ಕೃಷಿ ವಿಶ್ವವಿದ್ಯಾನಿಲಯ ಆಯೋಜನೆ. ಕೃಷಿ ನವೋದ್ಯಮಿಗಳ ವಸ್ತು ಪ್ರದರ್ಶನ ಮತ್ತು ಸಂವಹನ. ಉದ್ಘಾಟನೆ: ವಿವಿ ಕುಲಪತಿ ಡಾ. ಎಸ್.ವಿ. ಸುರೇಶ. ಮುಖ್ಯ ಅತಿಥಿಗಳು: ಕೇಂದ್ರ ಸರ್ಕಾರದ ಜೈವಿಕ ತಂತ್ರಜ್ಞಾನ ಸಂಸ್ಥೆ ವ್ಯವಸ್ಥಾಪಕ ಡಾ. ಜಿತೇಂದ್ರಕುಮಾರ್, ಶಿಕ್ಷಣ ನಿರ್ದೇಶಕ ಡಾ.ಕೆ.ಸಿ. ನಾರಾಯಣಸ್ವಾಮಿ, ವಿಸ್ತರಣಾ ನಿರ್ದೇಶಕ ಡಾ.ವಿ.ಎಲ್. ಮಧುಪ್ರಸಾದ್, ವಿವಿ ಡೀನ್ ಡಾ.ಎನ್.ಬಿ. ಪ್ರಕಾಶ್, ಸಂಶೋಧನಾ ನಿರ್ದೇಶಕ ಡಾ.ವೆಂಕಟೇಶ್, ಸ್ನಾತಕೋತ್ತರ ವಿಭಾಗದ ಡೀನ್ ಡಾ. ಎಚ್.ಸಿ. ಪ್ರಕಾಶ್, ಕುಲಸಚಿವ ಡಾ.ಬಸವೇಗೌಡ, ವಿವಿ ಆಡಳಿತಾಧಿಕಾರಿ ಡಾ. ಕೆ.ಎಂ. ಹರಿಣಿಕುಮಾರ್. ಸ್ಥಳ: ನಾರ್ತ್ ಬ್ಲಾಕ್ ಸಭಾಂಗಣ, ಕೃಷಿ ವಿವಿ, ಜಿಕೆವಿಕೆ. ಬೆಳಗ್ಗೆ 11.30ಕ್ಕೆ.

ಕೃಷಿ ವಿಶ್ವವಿದ್ಯಾನಿಲಯ, ಬೆಂಗಳೂರು
ಆಡಳಿತ ಕಛೇರಿ, ಗಾಂಧಿ ಕೃಷಿ ವಿಜ್ಞಾನ ಕೇಂದ್ರ, ಬೆಂಗಳೂರು–560 065
ದೂರವಾಣಿ : 23332521, 23330153 [259]

No. AO/RT/11/62/Backlog Teaching Post/2023-24 Date: 07-08-2023

ಪ್ರಕಟಣೆ

ಬೆಂಗಳೂರು ಕೃಷಿ ವಿಶ್ವವಿದ್ಯಾನಿಲಯದಲ್ಲಿ 02 ಬ್ಯಾಕ್‌ಲಾಗ್ ಬೋಧಕರ ಹುದ್ದೆಗಳನ್ನು **ಪ್ರಾಧ್ಯಾಪಕ ವರ್ಗ: Agril. Engg.-1 Post (SC), Plant Pathology-1 Post (ST),** ತುಂಬಲು ಅರ್ಹ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಕರೆಯಲಾಗಿದೆ. ಭರ್ತಿ ಮಾಡಲಾದ ಅರ್ಜಿಗಳನ್ನು ಸ್ವೀಕರಿಸಲು ಕಡೆಯ ದಿನಾಂಕ: **07–09–2023** ಆಗಿರುತ್ತದೆ. ಪ್ರಕಟಣೆ, ವಿದ್ಯಾರ್ಹತೆ ಹಾಗೂ ಅರ್ಜಿ ನಮೂನೆಯನ್ನು ವಿಶ್ವವಿದ್ಯಾನಿಲಯದ ವೆಬ್‌ಸೈಟ್‌ನಿಂದ **(website: www.uasbangalore.edu.in)** ಡೌನ್‌ಲೋಡ್ ಮಾಡಿಕೊಳ್ಳಬಹುದು.

ಆದೇಶದ ಮೇರೆಗೆ
ಸಹಿ/-- ಆಡಳಿತಾಧಿಕಾರಿಗಳು

09-08-2023
Prjavani Pg 03

FAX: 91-080-23332521 Ph.No. Office: 23332521
23330153 (Ext.259)

UNIVERSITY OF AGRICULTURAL SCIENCES, BANGALORE
Administrative Office, GKVK, Bengaluru – 560 065.

No. AO/RT/11/62/Backlog Teaching Post/2023-24 Date:07-08-2023

NOTIFICATION

Sub: Recruitment of Backlog Teaching Post.

Applications are invited in the prescribed form from the eligible candidates for filling up of 02 Backlog Teaching Posts: Professor Cadre: Agril. Engg-1 Post (SC), Plant Pathology-1 Post (ST). **Last date for receipt of filled in applications is 07-09-2023.** The detailed notification with qualifications and application form can be downloaded from the official website of the University (**www.uasbangalore.edu.in**).

By Order
Sd/-, Administrative Officer

09-08-2023
Times of Ind Pg 09

ಮಾರುಕಟ್ಟೆ ಅಸ್ಥಿರಗೊಳಿಸುವ ಯತ್ನ **ತೆರೆ ಹಿಂದಿವೆ ಕಾಣದ ಕೈಗಳು, 11 ತಿಂಗಳ ಬಳಿಕ ಆಮದು ಭೀತಿ ಸೃಷ್ಟಿ**

ರಾಜ್ಯದ ಅಡಕೆ ಬೆಳೆಗಾರರ ಕಾಡುತ್ತಿದೆ ಭೂತಾನ್ ಭೂತ!

09-08-2023
Vijayavani Pg 07

■ ಅರವಿಂದ ಅಕ್ಕಾಪುರ ಶಿವಮೊಗ್ಗ

ರಾಜ್ಯದಲ್ಲಿ ಅಡಕೆ ಮಾರುಕಟ್ಟೆ ಅಸ್ಥಿರಗೊಳಿಸಿ, ರೈತರ ಆತಂಕದ ಲಾಭ ಅನುಕೂಲಕ್ಕೆ ಬಳಸಿಕೊಳ್ಳುವ ಷಡ್ಯಂತ್ರವೊಂದು ತೆರೆಮರೆಯಲ್ಲಿ ನಡೆಯುತ್ತಿದೆ.

ಭೂತಾನ್‌ನಿಂದ 17 ಸಾವಿರ ಟನ್ ಅಡಕೆ ಆಮದಾಗಿದೆ ಎಂಬ ಸುದ್ದಿ ಕಳೆದೊಂಯ ವಾರದಿಂದ ಅಡಕೆ ಬೆಳೆಯುವ ಪ್ರದೇಶಗಳಲ್ಲಿ ಹರಿದಾಡುತ್ತಿದೆ. ರಾತಿ ಇಡಿ 50 ಸಾವಿರ ರೂ. ಗಡಿ ದಾಟಿ ಅಡಕೆ ಬೆಳೆಗಾರರ ಮೊಗದಲ್ಲಿ ಮಂದಹಾಸ ಕಾಣುತ್ತಿರುವ ಸಂದರ್ಭದಲ್ಲೇ ಈ ಸುದ್ದಿ ಆತಂಕ ಮೂಡಿಸಿದೆ.

ಇನ್ನೇನು ಅಡಕೆ ಮಾರುಕಟ್ಟೆ ಪಾತಾಳಕ್ಕೆ ತಲುಪುತ್ತದೆ ಎಂಬ ಕಳವಳದಿಂದ ಬೆಳೆಗಾರರು ಇರುವ ಅಡಕೆಯನ್ನೆಲ್ಲ ಮಾರಾಟ ಮಾಡುವ ತರಾತುರಿಯಲ್ಲಿದ್ದಾರೆ. ಮಾರುಕಟ್ಟೆಯಲ್ಲೂ ಅಡಕೆ ಧಾರಣೆ ಸ್ವಲ್ಪಮಟ್ಟಿನ ಕುಸಿತ ಕಂಡಿದೆ.

ವರ್ಷದ ಹಿಂದೆ ಗ್ರೀನ್ ಸಿಗ್ನಲ್: ಕೇಂದ್ರ ಸರ್ಕಾರ ಭೂತಾನ್‌ನಿಂದ ಅಡಕೆ ಆಮದು ಮಾಡಿಕೊಳ್ಳಲು ಅನುಮತಿ ನೀಡಿದ್ದು 2022ರ ಸೆಪ್ಟೆಂಬರ್‌ನಲ್ಲಿ. ಈ 11 ತಿಂಗಳ ಅವಧಿಯಲ್ಲಿ ಅಡಕೆ ಮಾರುಕಟ್ಟೆಯಲ್ಲಿ ಯಾವುದೇ ಸಂಚಲನ ಉಂಟಾಗಿರಲಿಲ್ಲ. ಬಯಲುಸೀಮೆ ಪ್ರದೇಶದಲ್ಲೂ ಅಡಕೆ ಸಂಸ್ಕರಣೆ ನಡೆಯುತ್ತಿದ್ದು, ಇನ್ನು ಕೆಲವು ದಿನಗಳಲ್ಲಿ ಆ ಅಡಕೆ ಮಾರುಕಟ್ಟೆಗೆ ಬರಲಿದೆ. ವರ್ಷಾಂತ್ಯಕ್ಕೆ ಮಲೆನಾಡಿನ ಅಡಕೆಯೂ ಸಿದ್ಧವಾಗುತ್ತದೆ. ಇಂತಹ ಸನ್ನಿವೇಶದಲ್ಲಿ ಭೂತಾನ್ ಅಡಕೆ ಸುದ್ದಿ ತೇಲಿಬಿಟ್ಟು ಧಾರಣೆ ಕುಸಿಯುವಂತೆ ನೋಡಿಕೊಳ್ಳುವುದು, ಬೆಲೆ ಕಡಿಮೆಯಾದ ಬಳಿಕ ತಮಗೆ ಆಗತ್ಯವಿರುವಷ್ಟು ಪ್ರಮಾಣದಲ್ಲಿ ಅಡಕೆ ಖರೀದಿಸುವುದು ಕೆಲವರ ದೂರಾಲೋಚನೆಯಾಗಿದೆ ಎಂಬುದು ಸಹಕಾರ ವಲಯದಲ್ಲಿ ಕೇಳಿಬರುತ್ತಿರುವ ಮಾತುಗಳು.



ಸಂಸ್ಕರಣೆಗೊಂಡ ಅಡಕೆಯನ್ನು ವಿಂಗಡಣೆ ಮಾಡುತ್ತಿರುವ ಮಹಿಳೆಯರು.



ಕೇಂದ್ರ ಸರ್ಕಾರ ಭೂತಾನ್‌ನಿಂದ ಅಡಕೆ ಆಮದು ಮಾಡಿಕೊಳ್ಳಲು ಒಪ್ಪಿಗೆ ನೀಡಿರುವುದು ನಿಜ. ಆದರೆ ಇನ್ನೂ ಆ ಅಡಕೆ ದೇಶದೊಳಕ್ಕೆ ಬಂದಿಲ್ಲ. ಅಲ್ಲಿನ ಕಳಪೆ ಹಸಿ ಅಡಕೆ ಇಲ್ಲಿಗೆ ಬಂದು ಸಂಸ್ಕರಣೆ ಆಗುವಷ್ಟರಲ್ಲಿ ಅದರ ಗುಣಮಟ್ಟ ಮತ್ತಷ್ಟು ಕುಸಿಯುತ್ತದೆ. ಯಾವ ಕಾರಣಕ್ಕೂ ಆ ಅಡಕೆ ಇಲ್ಲಿ ಸಿದ್ಧವಾಗುವ ಅಡಕೆಗೆ ಸರಿಸಾಟಿಯಲ್ಲ. ಹೀಗಾಗಿ ಅಡಕೆ ಬೆಳೆಗಾರರು ಆತಂಕಪಡಬೇಕಾದ ಅಗತ್ಯವಿಲ್ಲ. ತರಾತುರಿಯಲ್ಲಿ ಅಡಕೆ ಮಾರಾಟ ಮಾಡುವ ಬದಲು ಸ್ವಲ್ಪ ಸಮಯ ರೈತರು ಕಾಯಬೇಕು. ಖಂಡಿತವಾಗಿಯೂ ಮಾರುಕಟ್ಟೆ ಸ್ಥಿರವಾಗುತ್ತದೆ.

| ಮಹೇಶ್ ಹುಲ್ಕುಳಿ ಮ್ಯಾಮ್ಕೋಸ್ ಉಪಾಧ್ಯಕ್ಷ

ರಾಜ್ಯದ ಕೊಡುಗೆಯೇ ಹೆಚ್ಚು

ಕರ್ನಾಟಕ, ಕೇರಳ, ಅಸ್ಸಾಂ, ಮಹಾರಾಷ್ಟ್ರ, ಪಶ್ಚಿಮ ಬಂಗಾಳ ಹಾಗೂ ತ್ರಿಪುರ ರಾಜ್ಯಗಳ ಕೆಲ ಪ್ರದೇಶಗಳಲ್ಲಿ ಅಡಕೆ ಬೆಳೆಯಲಾಗುತ್ತದೆ. ಆದರೆ ಕರ್ನಾಟಕದಲ್ಲಿ 2.61 ಲಕ್ಷ ಹೆಕ್ಟೇರ್ ಅಡಕೆ ಬೆಳೆಯುವ ಪ್ರದೇಶವಿದ್ದು, ದೇಶದ ಶೇ.61 ಅಡಕೆ ರಾಜ್ಯದಲ್ಲಿ ಉತ್ಪಾದನೆಯಾಗುತ್ತಿದೆ.

ವಾಸ್ತವ ಮರೆಮಾಚಿ ಲಾಭ ಪಡೆಯುವ ಯತ್ನ

ಕೇಂದ್ರ ಸರ್ಕಾರ ಅನುಮತಿ ನೀಡಿರುವುದು ಭೂತಾನ್ ಹಸಿ ಅಡಕೆ ಆಮದಿಗೆ. ಆದರೆ ಈಗ ಹಸಿ ಅಡಕೆ ಎಂಬ ವಿಷಯವನ್ನೇ ಮರೆಮಾಚಲಾಗುತ್ತಿದೆ. ಕೇಂದ್ರ ಸರ್ಕಾರ 2011-12ರಲ್ಲಿ ಅಡಕೆ ಸಂಸ್ಕರಣಾ ವೆಚ್ಚವನ್ನು ಕೆಜಿಗೆ ಕನಿಷ್ಠ 110 ರೂ. ಎಂದು ನಿಗದಿಪಡಿಸಿ ಅದರ ಮೇಲೆ ಶೇ.100 ಆಮದು ಸುಂಕ ಏರಿಸಿದ ಪರಿಣಾಮ ದೇಶೀಯ ಅಡಕೆಗೆ ಹೋಲಿಸಿದರೆ ಆಮದು ಅಡಕೆಯೇ ದುಬಾರಿ ಎನಿಸಿಕೊಳ್ಳತೊಡಗಿತು. ಸ್ಥಳೀಯವಾಗಿಯೇ 5ರಿಂದ 6 ಸಾವಿರ ರೂ.ಗೆ ಹಸಿ ಅಡಕೆ ದೊರೆಯುತ್ತಿರುವ ಸಂದರ್ಭದಲ್ಲಿ ಭೂತಾನ್‌ನ ಕಳಪೆ ಅಡಕೆ ಆಮದಿಗೆ ಯಾರೂ ಮುಂದಾಗುವುದಿಲ್ಲ ಎಂಬುದನ್ನು ವರ್ತಕರೇ ಒಪ್ಪಿಕೊಳ್ಳುತ್ತಿದ್ದಾರೆ.

ಇದೇ ಮೊದಲಲ್ಲ

ಅಡಕೆ ಮಾರುಕಟ್ಟೆ ಅಸ್ಥಿರಗೊಳಿಸುವ ಯತ್ನ ಇದೇ ಮೊದಲಲ್ಲ. ಈ ಹಿಂದೆಯೂ ಅನೇಕ ಬಾರಿ ಇಂತಹ ಸನ್ನಿವೇಶಗಳು ಎದುರಾಗಿವೆ. ಸುಪ್ರೀಂಕೋರ್ಟ್‌ನಲ್ಲಿ ಗುಟ್ಕಾ ನಿಷೇಧ ವಿಚಾರಣೆ, ಅಡಕೆಯಲ್ಲಿ ಕ್ಯಾನ್ಸರ್‌ಕಾರಕ ಅಂಶಗಳಿವೆ ಎಂದು ಕೇಂದ್ರ ಸರ್ಕಾರ ಕೋರ್ಟ್‌ಗೆ ಪ್ರಮಾಣಪತ್ರ ಸಲ್ಲಿಸಿದ ಸಂದರ್ಭ, ಕೆಲ ರಾಜ್ಯಗಳಲ್ಲಿ ಗುಟ್ಕಾ ನಿಷೇಧ ಮಾಡಿದಾಗ ಅಡಕೆ ಮಾರುಕಟ್ಟೆ ಅಸ್ಥಿರಗೊಂಡಿದ್ದಿದೆ. ಒಂದೇ ವಾರದಲ್ಲಿ ಕ್ವಿಂಟಾಲ್‌ಗೆ 5-10 ಸಾವಿರ ರೂ. ಕುಸಿತ ಕಂಡಿರುವ ನಿದರ್ಶನಗಳೂ ಇವೆ. ಈಗ ಮತ್ತೊಮ್ಮೆ ಆಂಥದ್ದೇ ಪ್ರಯತ್ನಗಳು ನಡೆಯುತ್ತಿವೆ.

For more information visit
University Library Website
Web - uasbagrilibindia.org
E-mail- librarian@uasbangalore.edu.in

Wheat prices jump to six-month high

Reuters
MUMBAI



Indian wheat prices surged to a six-month high on Tuesday due to limited supplies and robust demand ahead of the festival season, dealers said.

The rising prices may prompt New Delhi to eliminate import duties on the cereal to bolster supplies and control prices ahead of key State polls and next year's general election.

Rising wheat prices can contribute to food inflation and potentially complicate the efforts of both the government and the central bank to contain inflation.

"In all key producing States, farmer supplies have almost come to a halt," said a trader. "Flour mills are struggling to obtain sufficient supplies."

Wheat prices at Indore in Madhya Pradesh rose by 1.5% to ₹25,446 per metric tonne, the highest since February 10. Prices have surged by almost 18% over the past four months.

A leading trade body told Reuters in June India's wheat harvest in 2023 was at least 10% lower than the Farm Ministry's estimate.

09-08-2023
Hindu Pg 14

ಬೆಳೆ ವಿಮೆ ನೋಂದಣಿ ಆರಂಭ

ನೆಲಮಂಗಲ: 2023-24ನೇ ಸಾಲಿನ ಕರ್ನಾಟಕ ರೈತ ಸುರಕ್ಷಾ ಪ್ರಧಾನಮಂತ್ರಿ -ಸಲ್ ಭಿಮಾ ಯೋಜನೆಯಡಿಯ ಮುಂಗಾರು ಹಂಗಾಮು ಬೆಳೆ ವಿಮೆ ನೋಂದಣಿಯನ್ನು ಆರಂಭಿಸಲಾಗಿದ್ದು ರಾಗಿ, ಭತ್ತ, ಮುಸುಕಿನ ಜೋಳಕ್ಕೆ ವಿಮೆ ಮಾಡಿಸಲು ಆ.16ರಂದು ಕೊನೆಯ ದಿನವಾಗಿದ್ದು ರೈತರು ತಕ್ಷಣ ಸ್ಥಳೀಯ ನೋಂದಣಿ ಕೇಂದ್ರಗಳಿಗೆ ಹೋಗಿ ಉಪಯೋಗ ಪಡೆದುಕೊಳ್ಳಲು ತಿಳಿಸಲಾಗಿದೆ. ಹೆಚ್ಚಿನ ಮಾಹಿತಿಗಾಗಿ ಸಹಾಯಕ ನಿರ್ದೇಶಕರು, ರೈತ ಸಂಪರ್ಕ ಕೇಂದ್ರದ ಅಽಕಾರಿಗಳು ಅಥವಾ ತಾಲೂಕು ಸಂಯೋಜಕ ಮೊ.8495072375 ಕರೆ ಮಾಡಿ ಮಾಹಿತಿ ಪಡೆಯಬಹುದು ಎಂದು ಕೃಷಿ ಇಲಾಖೆ ಸಹಾಯಕ ಕೃಷಿ ನಿರ್ದೇಶಕ ರಾಮಕೃಷ್ಣ.ಹೆಚ್.ಕೆ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

09-08-2023
Hosadiganta Pg 04

09-08-2023
Hosadiganta Pg 01

ಎಕರೆ ಬಟನ್ ರೋಸ್ ಬೆಳೆ | ಲಕ್ಷಾಂತರ ರೂ. ಆದಾಯ ಗಳಿಕೆ

ಪರ್ಯಾಯ ಬೆಳೆ ಆದಾಯ ದುಪ್ಪಟ್ಟು

◆ ಮಂಜುನಾಥ ಗಂಗಾವತಿ

ಕೊಪ್ಪಳ: ದಶಕಗಳಿಂದ ಸಾಂಪ್ರದಾಯಿಕ ಕೃಷಿಗೆ ಒಗ್ಗಿದ್ದ ರೈತರೊಬ್ಬರು ಪರ್ಯಾಯ ಬೆಳೆ ಬೆಳೆದು ಲಕ್ಷಾಂತರ ರೂ. ಆದಾಯ ಗಳಿಸುತ್ತಿದ್ದಾರೆ. ತಾಲೂಕಿನ ಹೊಸೂರು ಗ್ರಾಮದ ನಿಂಗಪ್ಪ ಎಂಬ ರೈತ ತೋಟಗಾರಿಕೆ ಇಲಾಖೆಯಿಂದ ನರೇಗಾ ಯೋಜನೆ ಮೂಲಕ 206 ಮಾನವ ದಿನಗಳನ್ನು ಸೃಜಿಸಿಕೊಂಡು ಒಂದು ಎಕರೆಯಲ್ಲಿ ಬಟನ್ ರೋಸ್ ಬೆಳೆಯುತ್ತಿದ್ದಾರೆ.

ದಿಗಂತ ವಿಶೇಷ

ಪ್ರತಿ 2 ದಿನಕ್ಕೊಮ್ಮೆ ಕೊಪ್ಪಳ ತಾಲೂಕಿನ ಇರಕಲ್ಲಗಡ, ಬೇವೂರು ಹಾಗೂ ಹೊಸಪೇಟೆ ವ್ಯಾಪಾರಿಗಳಿಗೆ 10 ಕೆ.ಜಿ. ಬಟನ್ ರೋಸ್ ಮಾರಾಟ ಮಾಡುತ್ತಿದ್ದಾರೆ. ಪ್ರತಿ ಕೆಜಿಗೆ 110ರೂ.ನಂತೆ ಒಟ್ಟು ಪ್ರತಿ ತಿಂಗಳಿಗೆ 13,200ರೂ. ಆದಾಯ ಗಳಿಸುತ್ತಿದ್ದಾರೆ. ಹಬ್ಬ ಹರಿದಿನಗಳಲ್ಲಿ ಬೇಡಿಕೆಯಿದ್ದು, ಒಂದು ಕೆ.ಜಿ.ಗೆ 200ರೂ.ನಂತೆ ಮಾರಾಟ ಮಾಡುತ್ತಾರೆ. ಕಳೆದ ಆರು ತಿಂಗಳಲ್ಲಿ 1,58,400ರೂ. ಆದಾಯ ಪಡೆದಿದ್ದಾರೆ. ದೇವನಹಳ್ಳಿ ಹತ್ತಿರ ಇರುವ ವೆಂಕಟಾಪುರ ಗ್ರಾಮದಲ್ಲಿ ಮಾರಾಟ ಮಾಡಲಾಗುತ್ತಿದ್ದ ಗ್ಲ್ಯಾಡಿ ಯೇಟರ್ ತಳಿ ಬಟನ್ ರೋಸ್ ಪ್ರತಿ ಸಸಿಗೆ 14 ರೂ.ನಂತೆ ಒಟ್ಟು 2400 ಸಸಿ ಖರೀದಿಸಿದ್ದಾರೆ. ಗಿಡಗಳು ಕೂಡ ಸಮೃದ್ಧವಾಗಿ ಬೆಳೆದು ಹೂಗಳನ್ನು ಬಿಡುತ್ತಿವೆ.



"ಸಾಂಪ್ರದಾಯಿಕ ಬೆಳೆಗಳಿಂದ ಉತ್ತಮ ಆದಾಯ ಸಿಗುತ್ತಿರಲಿಲ್ಲ. ನರೇಗಾ ಸಹಾಯದಿಂದ ಬೆಳೆಯುತ್ತಿರುವ ಬಟನ್ ರೋಸ್‌ನಿಂದ ನಿತ್ಯವೂ ವಹಿವಾಟು ಆಗುತ್ತಿದ್ದು, ಕೃಷಿ ಕೆಲಸ ಹಾಗೂ ಕುಟುಂಬಕ್ಕೆ ಅನುಕೂಲವಾಗಿದೆ.

■ ನಿಂಗಪ್ಪ, ರೈತ

ಕೈಹಿಡಿದ ನರೇಗಾ

ನರೇಗಾ ಯೋಜನೆ ಮೂಲಕ 206 ಮಾನವ ದಿನಗಳನ್ನು ಸೃಜಿಸಲಾಗಿದ್ದು, ಒಟ್ಟು 63,654 ರೂ. ಕೂಲಿ ಮೊತ್ತ ಜಮೆಯಾಗಿದೆ. ಜತೆಗೆ 23,000 ರೂ. ಸಾಮಗ್ರಿ ಮೊತ್ತವನ್ನು ಖಾತೆಗೆ ಜಮೆ ಮಾಡಲಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.



"ಜಿಲ್ಲೆಯಲ್ಲಿ ನರೇಗಾ ಯೋಜನೆಯಲ್ಲಿ ರೈತರಿಗೆ ಪರ್ಯಾಯ ಬೆಳೆಗಳಿಗೆ ಸಹಾಯ ಒದಗಿಸಲಾಗಿದೆ. ಈ ವರ್ಷ ಗುರಿಗಿಂತ ಹೆಚ್ಚು ಸಾಧನೆಯಾಗಿದೆ. ರಾಜ್ಯದಲ್ಲೇ ಕೊಪ್ಪಳ ಜಿಲ್ಲೆ ಮೂರನೇ ಸ್ಥಾನದಲ್ಲಿದೆ. ಜಾಬ್ ಕಾರ್ಡ್ ಹೊಂದಿದವರು ಯೋಜನೆ ಸದುಪಯೋಗಪಡಿಸಿಕೊಳ್ಳಲಿ.

■ ರಾಹುಲ್ ರತ್ನಂ ಪಾಂಡೆಯ, ಜಿಪಂ ಸಿಇಒ

08-08-2023
Viswavani add Pg 03

ಇನ್ನು ಎರಡು ವರ್ಷಗಳ ನಂತರ ಏನಾಗಬಹುದು ಎಂಬ ಕಲ್ಪನೆ ಮಾಡುತ್ತಿರುವೆ. ನೆಲದಲ್ಲಿರುವ ಎಲ್ಲಾ ಅಕೇಶಿಯಾ ಸಸಿಗಳು ತಮ್ಮ ಸ್ವಭಾವದಂತೆ ವೇಗವಾಗಿ ಬೆಳೆದರೆ ಸುತ್ತಲಿನ ಯುಪಟೋರಿಯಂ ನಿರ್ಮೂಲ ಖಚಿತ. ಆದರೆ ಮತ್ತೆ ಮತ್ತೆ ಮತ್ತಿತರ ಸ್ಥಳೀಯ ಸಸ್ಯವರ್ಗ? ಬಹುಶಃ ಅವುಗಳಿಗೂ ತಾಣವಿಲ್ಲ, ಉಳಿವಿಲ್ಲ.

ಎಲ್ಲೆಲ್ಲೂ ಬೂದಿಯ ರಾಶಿ. ಅದರ ಮೇಲೆ ಬೆಂಕಿಯ ಝಳಕ್ಕೆ ಉದುರಿದ ಎಲೆಗಳು. ಆದರೆ ಮೂರು ದಿನದ ಹಿಂದಿನ ಕಿಚ್ಚು ಪೂರಾ ಆರಿಲ್ಲ ಎಂಬಂತೆ ದಪ್ಪ ಮರದ ಕಪ್ಪು ಕಾಂಡಗಳಿಂದ ಹೊಗೆ ಹಾಯುತ್ತಿತ್ತು. ಜೀವಜಾಲದ ಕುರುಹುಗಳನ್ನೆಲ್ಲ ಅಳಿಸಿದಂತಿತ್ತು. ಮಹಾಭಾರತ ಯುದ್ಧಾನಂತರದ ಕುರುಕ್ಷೇತ್ರ ರಣರಂಗದ ನೆನಪಾಯಿತು.

ಹಿಂದಿನ ಬೇಸಿಗೆ ಎಲ್ಲ ರೀತಿಯಲ್ಲೂ ಕಟುವಾಗಿತ್ತು. ನವೆಂಬರ್ ನಂತರ ಮೇ ಮಧ್ಯದ ತನಕ ಒಂದು ಹನಿ ಮಳೆ ಇಲ್ಲ. ಬಿಸಿಲಿನ ತೀವ್ರತೆಯೂ ಹೆಚ್ಚು, ಸಹಜವೋ, ಕಿಡಿಗೇಡಿಗಳ ಕೃತ್ಯವೋ ಅಂತೂ ಶಿರಸಿ ತಾಲೂಕಿನ ಎಲ್ಲೆಡೆಯಿಂದ ಕಾಳ್ಗಿಚ್ಚಿನ ಸುದ್ದಿ ದಿನನಿತ್ಯದ ವರ್ತಮಾನವಾಗಿತ್ತು. ಅದೆಷ್ಟು ಸಾವಿರ ಎಕರೆ ಕಾಡು ಸುಟ್ಟು ಕರಕಲಾಯಿತೋ ಗೊತ್ತಿಲ್ಲ.



» ವಿನಾಯಕ ಭಟ್ ನರೂರ

ನಮ್ಮೂರಿನ ಆಸುಪಾಸಿನಲ್ಲಿ ಹೊಗೆ ಕಾಣಿಸಿಕೊಂಡರೆ ಜೀವ ತಲ್ಲಣಿಸುತ್ತಿತ್ತು. 'ಒಂದಾದರೂ ಒಳ್ಳೆ ಮಳೆ ಬರಲಪ್ಪಾ' ಅಂತ ಹಂಬಲಿಸಿದ ಕಾಲ.

ಈ ಕಾದಿಟ್ಟ ಅರಣ್ಯ ನಮ್ಮೂರಿನ ಜೋಗಿಕಟ್ಟೆ ಮತ್ತು ಭಟ್ರಕೆರೆ ಎಂಬ ಎರಡು ಸಣ್ಣ ಕೆರೆಗಳ ಜಲಾನಯನ ಪ್ರದೇಶ. ಅಪರೂಪದ ಹಕ್ಕಿ, ಪಾತರಗಿತ್ತಿಗಳನ್ನು ಅರಸಿಕೊಂಡು ಇಲ್ಲಿ ಹಲವು ವರ್ಷಗಳಿಂದ ಸುತ್ತಿರುವೆ. ಆದರೆ ಸುತ್ತಮುತ್ತಲಿನ ಜನರ ಅನೇಕ ಅವಶ್ಯಕತೆಗಳನ್ನು ಪೂರೈಸಿ ಕಾಡು ಬಡವಾಗಿತ್ತು, ಬರಡಾಗತೊಡಗಿತ್ತು. ಏಳೆಂಟು ವರ್ಷದ ಈಚೆಗೆ ಅರಣ್ಯ ಇಲಾಖೆ ಇದರ ಸುತ್ತ ಗಡಿ ಅಗಳ ತೆಗೆದು, ಅಲ್ಲಲ್ಲಿ ಅಕೇಶಿಯಾ ನೆಟ್ಟಿತು. ಉದ್ಯೋಗ ಖಾತ್ರಿಯ ಇಂಗುಗುಂಡಿಗಳು ವನದ ಪುನರ್ಜೀವನಕ್ಕೆ ನೆರವಾದವು. ಅಕೇಶಿಯಾ ಎತ್ತರಕ್ಕೇರಿದರೆ, ತಳಹಂತದಲ್ಲಿ ಸ್ವಾಭಾವಿಕ ಸಸ್ಯವರ್ಗ ದಟ್ಟೈಸಿತು. ಆಗಲೇ ಬಂತು ನೋಡಿ ಕಾಡಿನ ಬೆಂಕಿ! 'ಪಾರೆಸ್ಟನೋರು ಬಂದಿದ್ರು. ಎಂತಾ ಮಾಡಾಕೂ ಆಗಲಿಲ್ಲ. ಆ ನಮನಿ ಝಳ. ರಸ್ತೆ ದಾಟಿ ಗದ್ದೆ ಮಟಾ ಬೆಂಕಿ ಬಂದಿತ್ತು' ಅಂದ ಭಟ್ರಕೆರೆ ಅಂಗಳದಲ್ಲಿ ಕುರಿ ಮೇಯಿಸುತ್ತಿದ್ದ ಮುದುಕ.




ಚೆಗುರಿದ ಮತ್ತಿ

ಮಳೆ ಬಂದ ನಂತರ, ಮತ್ತಿ ಗಿಡಗಳು ನೆಲಮಟ್ಟದಲ್ಲಿ ಟಿಸಿಲೊಡೆದು ಚಿಗುರಿದ್ದು ಕಂಡಿತು. ಅಷ್ಟೇ ಅಲ್ಲ, ಬೆಂಕಿಯ ಬಾಧೆಗೆ ಒಳಗಾಗಿದ್ದ ತುಸು ಎತ್ತರದ ಮತ್ತಿ ಮರಗಳು ಕೂಡ ಹಸಿರಾಗಿದ್ದು ಆಚ್ಚರಿ ತಂದಿತು. ನಮ್ಮಲ್ಲಿಯ ಎಲೆ ಉದುರುವ ಪ್ರಮುಖ ಸಸ್ಯಗಳಲ್ಲಿ ಇದೂ ಒಂದು. ಸೊಪ್ಪು, ತರಗೆಲೆ, ಕಟ್ಟಿಗೆ, ಗಟ್ಟಿ ಮರಮಟ್ಟಿನ ಬಹೂಪಯೋಗಿ ಮರವಿದು.



ಅಕೇಶಿಯಾ ಸಸಿಗಳ ನೆಲಹಾಸು!

ಮೊನ್ನೆ ಮಳೆ ಬರುವಾಗ ಅದೇ ಜಾಗಕ್ಕೆ ಹೋಗಿದ್ದೆ. ನಮ್ಮ ಬೆಟ್ಟದಲ್ಲಿ ಒಣ ಬಿದಿರು ಮಟ್ಟಿ (ಮೆಳೆ) ಸುಟ್ಟ ಜಾಗದಲ್ಲಿ ತಾನಾಗಿ ಹೊಸ ಹಸಿರು ರೂಪುಗೊಂಡ ಬಗೆಯನ್ನು ಹಿಂದೊಮ್ಮೆ ವಿವರಿಸಿದ್ದೆ. ಆದರೆ ಇಡೀ ಕಾಡು ಭಸ್ಮವಾದಾಗ ನಿಸರ್ಗದ ಮರುವಿನ್ಯಾಸದ ಅಡಿಪಾಯ ಹೇಗಿದ್ದೀತು? ಮೊದಲಿದ್ದ ಸಸ್ಯ ವೈವಿಧ್ಯ ಪುನಃ ಸ್ಥಾಪನೆ ಆದೀತಾ? ನಾಲ್ಕು ತಿಂಗಳ ಬಳಿಕ ಮಳೆಯಲ್ಲಿ ಅದೇ ಜಾಗಕ್ಕೆ ಹೋಗಲು ಕಾರಣ ಈ ಕುತೂಹಲ.



ವಾರವಿಡೀ ಮಳೆ ಸುರಿದಿದ್ದರಿಂದ ಇಂಗುಗುಂಡಿಗಳು ತುಂಬಿ ತುಳುಕುತ್ತಿದ್ದವು. ಅಲ್ಲಿಂದ ಹೊರಬಿದ್ದ ನೀರು ಸಣ್ಣ ತೊರೆ, ಜಲಪಾತಗಳಾಗಿ ಕಾಲುವೆ ಸೇರಿ ಕೆರೆಗೆ ಹರಿಯುತ್ತಿತ್ತು. ಜೋಗಿಕಟ್ಟೆ, ಭಟ್ರಕೆರೆ ಭರ್ತಿ. ಇರಲಿ, ಕಾಡು ನೋಡೋಣ. ನಿರೀಕ್ಷೆಯಂತೆ ಯುಪಟೋರಿಯಂ ಪಾದಾರ್ಪಣೆ ಮಾಡಿ ಆಗಲೇ ಎದೆಯೆತ್ತರ ಬೆಳೆದಿತ್ತು. ಇದಕ್ಕೆ ನಮ್ಮಲ್ಲಿ ಬಿಳಿ ಚದುರಂಗ, ಕಾಂಗ್ರೆಸ್ ಮಟ್ಟ ಅಂತಲೂ ಹೆಸರಿದೆ. ಬೆಂಕಿ ಬಿದ್ದರೂ, ಬೀಳದಿದ್ದರೂ ಇದರ ಪುನರುತ್ಪತ್ತಿಗೆ ಏನೂ ಭಂಗವಿಲ್ಲ. ಮರಗಳ ದಟ್ಟ ಮೇಲ್ಛಾವಣಿ ಇಲ್ಲದ ಇಂಥ ಜಾಗ ಸಿಕ್ಕರೆ ಬಲು ಪ್ರೀತಿ. ಒಂದೇ ವರ್ಷದಲ್ಲಿ ಏಳೆಂಟು ಅಡಿ ಎತ್ತರದ ದಟ್ಟ ಪೊದೆ ಸಮೂಹ ಸೃಷ್ಟಿಸಿಕೊಂಡು, ಬೇಸಿಗೆಯಲ್ಲಿ ಒಣಗಿ ಮತ್ತೆ ಬೆಂಕಿ ಆಹ್ವಾನಿಸುವ ಉಪಟಳಕಾರಿ ಯುಪಟೋರಿಯಂ.

ಅಕೇಶಿಯಾ ಸಸಿಗಳ ನೆಲಹಾಸು: ಮೂರನೆಯದು ಅಕೇಶಿಯಾ. ಅಕೇಶಿಯಾ ಗುಂಪಿನಲ್ಲಿ ಗೊಬ್ಬಳಿ, ಕಗ್ಗಲಿ, ಜಾಲಿ ಇತ್ಯಾದಿ ಅನೇಕ ಪ್ರಭೇದಗಳಿದ್ದರೂ ಅರಣ್ಯ ಇಲಾಖೆಯ ನೆಡುತೋಪುಗಳಲ್ಲಿ ಸಾಮಾನ್ಯವಾಗಿ ಕಾಣುವುದು ಅಕೇಶಿಯಾ ಆರಿಕ್ಯುಲಿಫಾರ್ಮಿಸ್. ಕಾಳ್ಗಿಚ್ಚಿನ ಸಮಯದಲ್ಲಿ ಇಲ್ಲಿದ್ದ ಅತಿ ಎತ್ತರದ ಮರಗಳು ಅವೇ. ಆದರೆ, ಅವ್ಯಾವುದೂ ಚಿಗುರಿ ಜೀವಂತಿಕೆಯ ಲಕ್ಷಣ ತೋರಲಿಲ್ಲ. ಅರ್ಥಾತ್ ಬೆಂಕಿಯ ತಾಪ ತಾಳುವ ಸಾಮರ್ಥ್ಯ ಅವಕ್ಕಿಲ್ಲ. ಅಂದರೆ ಪುನಃ ಇದನ್ನು ನೆಡಬೇಕಾ? ಅರೆ, ಇದೇನು ನೆಲದಲ್ಲಿ ತೆಳ್ಳಗೆ ಹುಲ್ಲು ಹುಟ್ಟಿದಂತಿದೆಯಲ್ಲ! ಉಹೂಂ, ಅದು ಹುಲ್ಲಲ್ಲ, ಲಕ್ಷೋಪಲಕ್ಷ ಅಕೇಶಿಯಾ ಸಸಿಗಳ ನೆಲಹಾಸು! ಈ ವಿಲಕ್ಷಣ ಪುನರುತ್ಪತ್ತಿ ಸಾಮರ್ಥ್ಯ ಬೇರೆ ಯಾವುದಾದರೂ ಸಸ್ಯಕ್ಕೆ ಇದೆಯಾ ಗೊತ್ತಿಲ್ಲ.

ನಮ್ಮ ಬ್ಯಾಣದಲ್ಲಿ ಇಪ್ಪತ್ತಕ್ಕೂ ಅಧಿಕ ಅಕೇಶಿಯಾ ಮರಗಳಿವೆ. ಕನಿಷ್ಠ ಮೂವತ್ತು ವರ್ಷ ವಯಸ್ಸಿನ ಹಳೇ ಮರಗಳು. ಅವುಗಳಲ್ಲಿ ಕಾಯಿ ಬಿಟ್ಟು, ಬೀಜ ಉದುರುತ್ತದೆ. ಆದರೆ ಮರದ ಕೆಳಗೆ ಬೆರಳೆಣಿಕೆಯಷ್ಟು ಸಸಿ ಹುಟ್ಟುತ್ತವೆ. ಆಕಸ್ಮಾತ್ ಮರ ಕಟಾವು ಮಾಡಿದರೆ ಆ ಜಾಗದಲ್ಲಿ ಸಾವಿರಾರು ಸಸಿಗಳ ಸಂತೆ. ಅದೇ ಬೆಂಕಿ ಬಿದ್ದ ಈ ಆಡವಿಯಲ್ಲಿ ಮೊಳಕೆ ಬಿತ್ತಿದಂತೆ ಸಸಿ ಜಾತ್ರೆ! ಏನಿದರ ಗುಟ್ಟು?

ಇನ್ನು ಎರಡು ವರ್ಷಗಳ ನಂತರ ಇಲ್ಲಿ ಏನಾಗಬಹುದು ಎಂಬ ಕಲ್ಪನೆ ಮಾಡುತ್ತಿರುವೆ. ಇವಿಷ್ಟೂ ಅಕೇಶಿಯಾ ಸಸಿಗಳು ತಮ್ಮ ಸ್ವಭಾವದಂತೆ ವೇಗವಾಗಿ ಬೆಳೆದರೆ ಯುಪಟೋರಿಯಂ ನಿರ್ಮೂಲ ಖಚಿತ. ಮತ್ತೆ ಮತ್ತಿ ಮತ್ತಿತರ ಸ್ಥಳೀಯ ಸಸ್ಯವರ್ಗ? ಬಹುಶಃ ಅವುಗಳಿಗೂ ತಾಣವಿಲ್ಲ, ಉಳಿವಿಲ್ಲ

09-08-2023
Ind Exp Pg 07

Solar powered mini-tractor empowers farmers

EXPRESS NEWS SERVICE
@ Chitradurga

WITH the agricultural sector facing labour issues, farmers, especially the youth, who are entering the sector are setting their minds onto new techniques of farming. One among them is the use of non-conventional energy, primarily solar power.

At Siddavvanadurga village, progressive farmer Channabasappa, son of Shivanna, started using solar powered mini tractors and has successfully cultivated various crops in his field.

He is using this tractor as an alternative for the bulls which were used in tilling the land and has thereby saved a lot of money. The solar energy run mini tractor has become the cynosure of the public.



Channabasappa and residents of Siddavvanadurga with the solar powered tractor

He uses the tractor to till ragi, little millet and other crops that do not grow high. This mini solar powered tractor works uninterruptedly for eight hours once fully charged and used as an alternate to the bulls which were used in traditional cultivation. SELCO Foundation has funded the cost of the solar tractor by bearing the cost of Rs 2.09 lakh, whereas beneficiary Channabasappa has paid Rs 65,000 as cost of equipment. Moreover, it is light and compact and can move in any type of crops.

Farmer Channabasappa said, "At a time the entire is world is progressing, the agriculture sector should also move ahead. Solar energy is an alternative for the fossil fuel used in mechanisation of the agriculture."

ಯಂತ್ರೋಪಕರಣಗಳ ಬಾಡಿಗೆ ಹೆಚ್ಚಳ | ಅನ್ನದಾತನಿಗೆ ತಪ್ಪದ ಸಂಕಟ

ನೇಗಿಲಯೋಗಿಯ ಬದುಕು ಅತಂತ್ರ

ಕೃಷಿಯಲ್ಲಿ ಯಂತ್ರೋಪಕರಣಗಳನ್ನು ಬಳಸಿ ಕೃಷಿ ಮಾಡುವುದು ರೈತನಿಗೆ ದೊಡ್ಡ ಸವಾಲಾಗಿ ಪರಿಣಮಿಸುತ್ತಿದೆ. ಕೃಷಿ ಹೂಡಿಕೆಯ ಒಟ್ಟಾರೆ ವೆಚ್ಚದಲ್ಲಿ ಅರ್ಧ ಮೊತ್ತ ಕೃಷಿಯಂತ್ರಗಳಿಗೆ ಬೇಕಾಗಿರುವುದು ಅನ್ನದಾತರನ್ನು ಕಂಗೆಡಿಸುತ್ತಿದೆ.

ಕೂಲಿ ಕಾರ್ಮಿಕರ ಕೊರತೆಯಿಂದ ಬಹುತೇಕ ಕೃಷಿ ಚಟುವಟಿಕೆಗಳು ಟ್ರ್ಯಾಕ್ಟರ್, ಕಟಾವುಯಂತ್ರ, ಜೆಸಿಬಿ, ಟಂಟಂ, ಆಟೋ ಸೇರಿದಂತೆ ಹಲವು ಯಂತ್ರೋಪಕರಣಗಳನ್ನೇ ಅವಲಂಬಿಸಿವೆ. ಇದೀಗ ದಿನದಿಂದ ದಿನಕ್ಕೆ ಏರಿಕೆಯಾಗುತ್ತಿರುವ ಯಂತ್ರೋಪಕರಣಗಳ ಬಾಡಿಗೆ ದರದಿಂದ ಅನ್ನದಾತನಿಗೆ ದಿಕ್ಕು ತೋಚದಂತಾಗಿದೆ.



ಪ್ರಸಕ್ತ ಮುಂಗಾರು ಹಂಗಾಮಿಗೆ ಬಹುತೇಕ ರೈತರು ಟ್ರ್ಯಾಕ್ಟರ್ ಮೂಲಕ ಕೃಷಿ ಮಾಡುತ್ತಿದ್ದಾರೆ.ಪೆಟ್ರೋಲ್, ಡೀಸೆಲ್ ಬೆಲೆ ಹೆಚ್ಚಳವು ಪರೋಕ್ಷವಾಗಿ ಯಾಂತ್ರೀಕೃತ ಕೃಷಿಯ ಮೇಲೆ ಪರಿಣಾಮ ಬೀರಿದೆ. ಕೃಷಿ ಚಟುವಟಿಕೆಗಳಿಗೆ ಯಂತ್ರಗಳನ್ನೇ ಅವಲಂಬಿಸಿರುವ ಸಣ್ಣ, ಮಧ್ಯಮ ಹಂತದ ರೈತರು ಹೆಚ್ಚಿನ ಹಣವನ್ನು ಯಂತ್ರದ ಬಾಡಿಗೆಗೆ ಸುರಿಯುವಂತಾಗಿದೆ.ಕೃಷಿ ಭೂಮಿಯಲ್ಲಿ ಉಳುಮೆ, ಬಿತ್ತನೆ, ಒಕ್ಕಣಿಕೆ ಸೇರಿದಂತೆ ಎಲ್ಲ ರೀತಿಯ ಕೃಷಿ ಚಟುವಟಿಕೆಗಳಿಗಾಗಿ ಬಹುತೇಕ ರೈತರು ಬಾಡಿಗೆ ಯಂತ್ರೋಪಕರಣಗಳನ್ನೇ ಅವಲಂಬಿಸಿದ್ದಾರೆ.



ಈ ಹಿಂದೆ ಗ್ರಾಮಕ್ಕೆ ಒಂದೋ ಎರಡೋ ಟ್ರ್ಯಾಕ್ಟರ್ ಇದ್ದದ್ದು, ಇಂದು ಹತ್ತಕ್ಕೆ ಏರಿದೆ. ಮತ್ತೊಂದೆಡೆ, ಕೃಷಿಯಲ್ಲಿ ಯಾಂತ್ರೀಕರಣವನ್ನು ಉತ್ತೇಜಿಸುವ ಭಾಗವಾಗಿ ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಸಬ್ಸಿಡಿ ಮೂಲಕ ಟ್ರ್ಯಾಕ್ಟರ್ ಮತ್ತು ಯಂತ್ರಗಳನ್ನು ನೀಡುತ್ತಿವೆ. ಈ ಕ್ರಮದಲ್ಲಿ ಕೃಷಿಯಲ್ಲಿ ಪ್ರಮುಖ ಪಾತ್ರ ವಹಿಸುತ್ತಿದ್ದ ರಾಸುಗಳ ಮಹತ್ವ ಸಂಪೂರ್ಣ ಕಡಿಮೆಯಾಗುತ್ತಿದೆ.ಒಂದು ಕಾಲದಲ್ಲಿ ಹಳ್ಳಿಗಾಡಿನಲ್ಲಿ ರಾಸುಗಳಿಲ್ಲದ ರೈತ ಕುಟುಂಬವೇ ಇರಲಿಲ್ಲ. ಬೆಳೆ ಬೆಳೆಯುವಲ್ಲಿ ಅವು ರೈತನ ಬೆನ್ನೆಲುಬಾಗಿ ದುಡಿಯುತ್ತಿದ್ದವು. ಹೊಲ ಉಳುಮೆ ಮಾಡುವುದರಿಂದ ಹಿಡಿದು ಫಸಲು ಮನೆಗೆ ಬರುವವರೆಗೂ ಇವುಗಳ ಪಾತ್ರ ಮಹತ್ವದ್ದಾಗಿತ್ತು. ಅಂತಹ ಗೂಳಿಗಳು ಇಂದು ಕಾಣಸಿಗುತ್ತಿಲ್ಲ. ಬೇಸಿಗೆಯಲ್ಲಿ ಜಾನುವಾರುಗಳ ಮೇವಿನ ಹೊರೆ ಮತ್ತು ಮೇವಿನ ಕೊರತೆಯಿಂದ ಅವುಗಳನ್ನು ಮಾರಾಟ ಮಾಡಲಾಗುತ್ತಿದೆ.ಇದರಿಂದ ಕಡ್ಡಾಯವಾಗಿ ಸಾಗುವಳಿಗಾಗಿ ಟ್ರ್ಯಾಕ್ಟರ್‌ಗಳನ್ನು ಅವಲಂಬಿಸುವ ಪರಿಸ್ಥಿತಿ

| ಅನಿಲ್ ಗುಮ್ಮಘಟ್ಟ

ನಿರ್ಮಾಣವಾಗುತ್ತಿದೆ.ಈ ಹಿಂದೆ ಶೇ.85ರಷ್ಟು ರೈತರ ಕುಟುಂಬಗಳು ಜಾನುವಾರು ಹೊಂದಿದ್ದು, ಇಂದು ಶೇ.45ಕ್ಕೆ ಕುಸಿದಿದೆ.

ಟ್ರ್ಯಾಕ್ಟರ್‌ನಿಂದ ರೂಟರ್ ಹೊಡೆಯಲು ಗಂಟೆಗೆ ಈ ಹಿಂದೆ ರೂ.700–800 ಇತ್ತು. ಅದೀಗ ರೂ.1000–1200ಕ್ಕೆ ಏರಿಕೆಯಾಗಿದೆ. ಜಮೀನಿನ ಮಣ್ಣು ಸಮತಟ್ಟು ಮಾಡಲು ಹಿಂದೆ ರೂ.900–1200 ಇತ್ತು. ಈಗ ರೂ.1500ರಿಂದ 1700 ರೂ.ಗೆ ಜಿಗಿದಿದೆ. ಟ್ರ್ಯಾಕ್ಟರ್‌ನಿಂದ ರಂಟೆ ಹೊಡೆಯಲು ಹಿಂದೆರೂ.800–1000 ಇತ್ತು ಈಗ ರೂ.1000–1200 ರೂ.ಗೆ ತಲುಪಿದೆ. ಕೂರಿಗೆ ಬಿತ್ತನೆಗೆ ಹಿಂದೆ ರೂ.900–1000 ಇತ್ತು, ಅದೀಗ ರೂ.1500 ಆಗಿದೆ. ಜೆಸಿಬಿಯಿಂದ ಕಾಲುವೆ ಹೂಳೆತ್ತಲು ರೂ.600–800 ಇದ್ದ ಬಾಡಿಗೆದರ ರೂ.1000–1200 ರೂ.ಗೆ ಮುಟ್ಟಿದೆ.ಇದರೊಂದಿಗೆ ಕೂಲಿಕಾರರನ್ನು ಜಮೀನುಗಳಿಗೆ ಕರೆದೊಯ್ಯುವ ಮತ್ತು ಬೆಳೆಯನ್ನು ಸಾಗಿಸುವ ಟಂಟಂ, ಆಟೋಗಳ ಬಾಡಿಗೆದರ ಏರಿಕೆಯಿಂದ ಬೆಳೆ ಬೆಳೆಯುವುದೇ ದುಸ್ತರವಾಗಿದೆ ಎಂಬುದು ರೈತರ ಅಂಬೋಣ.

ಕೃಷಿ ವೆಚ್ಚವು ನಿರಂತರವಾಗಿ ಹೆಚ್ಚಳವಾಗುತ್ತಲೇ ಇದೆ. ಆದರೆ, ರೈತರ ಉತ್ಪನ್ನಗಳಿಗೆ ಮಾತ್ರ ಸರಿಯಾದ ಬೆಲೆ ಸಿಗುತ್ತಿಲ್ಲ. ಇದರಿಂದಾಗಿ ಅನೇಕ ರೈತರು ಕೃಷಿಯಿಂದ ವಿಮುಖರಾಗುವ ಪರಿಸ್ಥಿತಿ ನಿರ್ಮಾಣವಾಗಿದೆ.

> ಕೃಷಿಯೇ ನಮ್ಮ ಜೀವನಾಧಾರ. ನನ್ನ ಎರಡು ಎಕರೆಯಲ್ಲಿ ಭತ್ತ ನಾಟಿ ಮಾಡಿದರೆ, ಟ್ರ್ಯಾಕ್ಟರ್‌ಗಳ ಉಳುಮೆ ವೆಚ್ಚವೇ ಹೆಚ್ಚಾಗಿದೆ. ಈ ಹಿಂದೆ ರಾಸುಗಳಿಂದ ಕೃಷಿ ಮಾಡುವಾಗ ನಾಲ್ಕು ಕಾಸು ಉಳಿಯುತ್ತಿತ್ತು. ಈಗ ಮಾಡಿದ ಶ್ರಮಕ್ಕೆ ಪ್ರತಿಫಲ ಸಿಗದ ಪರಿಸ್ಥಿತಿ ನಿರ್ಮಾಣವಾಗಿದೆ.
> ▪ನರಸಿಂಹಪ್ಪ, ರೈತ

08-08-2023
S-karanataka Pg 08

08-08-2023
Eco times Pg 03

India's Tea Auction System under Stress

BUYING TREND SHIFTS Nearly 70% of the big buyers are now purchasing teas privately

Sutanuka.Ghosal@timesgroup.com

Kolkata: India's 162-year-old tea auction system is under severe stress as buyers of tea from the domestic as well as overseas markets are preferring to purchase teas from the producers privately, whereby they can get a credit for two months or more as compared to 13 days in case of purchases from the auction centres. Nearly 70% of the big buyers are now purchasing teas privately, according to industry executives. Two years ago, 52-54% of the teas used to come to the auction centres, but now the figure has fallen to 44% or 600 million kg out of the total production of 1,350 million kg, they said.

"Tea producers are falling over themselves to sell teas to buyers directly. In private sales, buyers get the first pick of the quality directly and therefore pick and choose the best teas. These prices are usually at an apparent premium over auction prices," said Mohit Agarwal, director, Asian Tea. "Generally, the credit periods in private sales range from one month to six months, with no penalty for delayed payments, compared to two weeks for auctions."



This acts as a disincentive for buyers to operate in auctions as reduced auction competition leads to softening of next week's private levels. "As a result producers are incentivising buyers to operate outside the auction system, to their detriment and to the detriment of the industry," said Agarwal.

Jayraman Kalyanasundaram, secretary, Calcutta Tea Traders Association, said, "The big buyers prefer to buy privately. When we say big buyers, we mean who is buying 10 lakh kg of teas annually. Teas coming to auctions started dwindling over the years and now it has fallen to 600 million kg. A new tea auction system – Bharat auction – has been introduced for auctioning of CTC and dust tea from April this year. We are yet to see the impact of this new system." Tea producers, however, said the experimentation with the new auction system has been against the will of the majority of the industry and will not lead to any increase in prices.

"The complicated operations of the new auction system along with the new proposed user fees will push even more buyers out of the auctions," said Agarwal. Tea prices have remained muted this year due to higher carry over stock from last year. Orthodox teas, which did very well last year in the global markets due to the absence of Sri Lankan orthodox tea, have seen a 30% fall in prices this year.